# ಅನುಕೂಲಕಾರಿ ಪೇಮೆಂಟ್ ಬ್ಯಾಂಕ್

**ಪೇಮೆಂಟ್ ಬ್ಯಾಂಕ್ ಎಂದರೆ ಹಣ ಪಾವತಿ ಸೇವೆಗಳಿಗೆ ಸಂಬಂಧಿಸಿದಂತೆ ಬ್ಯಾಂಕಿಂಗ್ ಚಟುವಟಿಕೆಗಳನ್ನು ಸೀಮಿತ ಪ್ರಮಾಣದಲ್ಲಿ ನಡೆಸುವಂತಹ ಸಂಸ್ಥೆ. ಇದರಿಂದ ಡೆಬಿಟ್ ಕಾರ್ಡ್ ಅಲ್ಲದೇ ಮೊಬೈಲ್ ಫೋನ್ ಮೂಲಕವೂ ಹತ್ತಾರು ಬಗೆಯ ಹಣ ಪಾವತಿ ಸೇವೆಗಳನ್ನು ಪಡೆದುಕೊಳ್ಳಲು ಅವಕಾಶವಾಗುತ್ತದೆ. ಮೊಬೈಲ್ ಫೋನ್ ಸೇವಾ ಸಂಸ್ಥೆ, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆ, ಅಂಚೆ ಕಚೇರಿಗಳಲ್ಲಿ ಈ ಸೇವೆ ಲಭ್ಯವಾಗಲಿದೆ. ಈ ಕುರಿತು ಜೆ.ಸಿ.ಜಾಧವ ಇಲ್ಲಿ ವಿವರಿಸಿದ್ದಾರೆ.**




ಜೆ.ಸಿ.ಜಾಧವ

ನಾವು ದಿನನಿತ್ಯದ ವ್ಯವಹಾರಗಳನ್ನು ಮಾಡುವಾಗ ಪ್ರತಿಯೊಂದು ಹಂತದಲ್ಲಿ ಅಂದರೆ ವಸ್ತುಗಳನ್ನು ಕೊಂಡುಕೊಳ್ಳುವಾಗ ಸಾಕಷ್ಟು ಚಿಲ್ಲರೆ ಸಮಸ್ಯೆಯನ್ನು ಎದುರಿಸುತ್ತೇವೆ. ಕೆಲವೊಂದು ಅಂಗಡಿಗಳಲ್ಲಿ ಅಥವಾ ಬಸ್‌ಗಳಲ್ಲಿ 'ದಯವಿಟ್ಟು ಸರಿಯಾದ ಚಿಲ್ಲರೆ ಕೊಟ್ಟು ಸಹಕರಿಸಿ' ಎಂಬ ಸೂಚನೆಯನ್ನೂ ಕಾಣುತ್ತೇವೆ. ಹೀಗೆ ಇಂತಹ ಸಮಸ್ಯೆಯನ್ನು ಹೋಗಲಾಡಿಸಲು ಇರುವ ವ್ಯವಸ್ಥೆಗೆ ಪೇಮೆಂಟ್ ಬ್ಯಾಂಕ್ ಎಂಬ ಹಣಕಾಸು ಕ್ಷೇತ್ರದ ಹೊಸ ಆವಿಷ್ಕಾರವು ಸಹಾಯವಾಗಲಿದೆ.

### ಪ್ರಯೋಜನ

- ನೋಟುಗಳ ಬಳಕೆ ಗಣನೀಯವಾಗಿ ತಗ್ಗುತ್ತದೆ. ಇದರಿಂದ ಆರ್‌ಬಿಐಗೆ ಪದೇ ಪದೇ ಹೊಸದಾಗಿ ನೋಟು ಮುದ್ರಿಸುವ ಶ್ರಮ ಕಡಿಮೆ ಆಗುತ್ತದೆ. ಕಾಗದ, ಮುದ್ರಣ ವೆಚ್ಚವೂ ತಗ್ಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ನಕಲಿ ನೋಟುಗಳ ಹಾವಳಿ ತಡೆಯಬಹುದಾಗಿದೆ.
- ಜನರು ಸದಾಕಾಲ ತಮ್ಮೊಂದಿಗೆ ನಗದು ಇಟ್ಟುಕೊಂಡು ಓಡಾಡಬೇಕಾದ ಅಗತ್ಯವಿಲ್ಲ.
- ಎ.ಟಿ.ಎಂಗಳಿಗೆ ಹೋಗಿ ಸರದಿಯಲ್ಲಿ ನಿಂತು ಹಣ ತೆಗೆಯುವ ತಾಪತ್ರಯ ಇರುವುದಿಲ್ಲ. ಎ.ಟಿ.ಎಂ ತಾಂತ್ರಿಕ ತೊಂದರೆ ಇದೆ ಎಂದು ಶಪಿಸುವಂತಿಲ್ಲ.
- ಮೊಬೈಲ್ ಫೋನ್ ಸಂಪರ್ಕ ಹಾಗೂ ಎಲ್ಲಾ ರೀತಿಯ ವಹಿವಾಟುಗಳಿಗೆ ಸಾಧನವಾಗಿ ಬಳಕೆ ಆಗುವುದರಿಂದ ಪರ್ಸ್‌ನಲ್ಲಿ ಹಣ ಇಡುವ ಅವಶ್ಯಕತೆ ಇಲ್ಲ.

PPI (Pre Paid Instruments) ಅರ್ಥಾತ್ ಪ್ರೀಪೇಯ್ಡ್ ಇನ್‌ಸ್ಟ್ರುಮೆಂಟ್ ಅಂದರೆ, ಮುಂಚಿತವಾಗಿಯೇ ಹಣ ಪಾವತಿಸಿ ನಂತರ ಸರಕು, ಸೇವೆ ಪಡೆಯಲು ಅವಕಾಶ ಮಾಡಿಕೊಡುವ ವ್ಯವಸ್ಥೆ. ಈ ವ್ಯವಸ್ಥೆಯ ಮೂಲಕ ದೇಶದಲ್ಲಿ ಈಗಾಗಲೇ 20 ಕಂಪೆನಿಗಳು ಪೂರ್ವ ಪಾವತಿ ಸೇವೆಗಳನ್ನು ಒದಗಿಸುತ್ತಿವೆ. ಉದಾ: ಏರ್‌ಟೆಲ್ ಮನಿ, ಕ್ವಿಕ್ ಸಿಲ್ವರ್, ಮೊಬಿಕ್ವಿಕ್, ಪೇಟಿಎಂ, ಐ.ಟಿ.ಝಡ್ ಕ್ಯಾಶ್‌ಕಾರ್ಡ್.

ಈ ಪಿಪಿಐ ಸೌಲಭ್ಯವನ್ನು ಪಡೆಯಲು ಗ್ರಾಹಕರು ಸ್ಮಾರ್ಟ್ ಫೋನ್ ಹೊಂದಿರಬೇಕಾಗುತ್ತದೆ. ಡೆಬಿಟ್ ಕಾರ್ಡ್ ಹಾಗೂ ಕ್ರೆಡಿಟ್ ಕಾರ್ಡ್ ಬಳಸಿ ವಿವಿಧ ರೀತಿಯ ಬಿಲ್‌ಗಳನ್ನು ಪಾವತಿ ಮಾಡುವ ಸೌಲಭ್ಯವೂ ಇದೆ. ಇಂತಹ ಸೇವೆ ಪಡೆಯಲು ಸುಶಿಕ್ಷಿತರಾದ ಕೆಲವರಿಗಷ್ಟೇ ಸದ್ಯ ಸಾಧ್ಯವಾಗುತ್ತಿದೆ.

### ಪಿ.ಪಿ.ಐ ಅನಾನುಕೂಲ

ಪ್ರೀ-ಪೇಯ್ಡ್ ಇನ್‌ಸ್ಟ್ರುಮೆಂಟ್ ವ್ಯವಸ್ಥೆಯಲ್ಲಿ ಮೊದಲೇ ಜಮಾ ಮಾಡಿದ ಹಣಕ್ಕೆ ಯಾವುದೇ ರೀತಿಯ ಬಡ್ಡಿಯನ್ನು ನೀಡಲಾಗುವುದಿಲ್ಲ. ಹಾಗಾಗಿ, ಈ ಪಿಪಿಐ ವ್ಯವಸ್ಥೆ ಸಾಮಾನ್ಯ ಗ್ರಾಹಕರಿಗೆ ಅಷ್ಟೊಂದು ಲಾಭಕರ ಎನಿಸುವುದಿಲ್ಲ.

ಒಂದು ಸಾರಿ ಪಿ.ಪಿ.ಐನಲ್ಲಿ ಹಣ ಜಮಾ ಮಾಡಿದರೆ ಅದನ್ನು ಪುನಃ ಬ್ಯಾಂಕ್ ಖಾತೆದಾರರಿಗೆ ಅಥವಾ ಬೇರೆ ಪಿ.ಪಿ.ಐಗೆ ವರ್ಗಾವಣೆ ಮಾಡುವುದು ಸಾಧ್ಯವಿಲ್ಲ. ಏನಿದ್ದರೂ ಜಮಾ ಆಗಿರವ ಹಣವನ್ನು ಖರ್ಚು ಮಾಡಿಯೇ ಖಾಲಿ ಮಾಡಬೇಕು.

ಪಿ.ಪಿ.ಐಗೆ ಜಮೆ ಮಾಡಿದ ಹಣವು ಬ್ಯಾಂಕ್ ಖಾತೆಗಳಲ್ಲಿ ಇರುವಷ್ಟು ಸುರಕ್ಷಿತವೂ ಅಲ್ಲ. ಏಕೆಂದರೆ ಗ್ರಾಹಕರು ಜಮಾ ಮಾಡಿದ ಹಣವನ್ನು ಬೇರೆ ಬ್ಯಾಂಕ್‌ನ ಎಂಬ ಖಾತೆಯಲ್ಲಿ ಠೇವಣಿ ರೂಪದಲ್ಲಿ ಸಂಗ್ರಹಿಸಿಸಲಾಗಿರುತ್ತದೆ. ಪ್ರತಿಬಾರಿ ಗ್ರಾಹಕರು ವಸ್ತುಗಳನ್ನು ಖರೀದಿಸಿದಾಗ ಅಥವಾ ನಿಗದಿತ ಸೇವೆಗಳನ್ನು ಪಡೆದುಕೊಂಡಾಗ ಗ್ರಾಹಕರ ಪರವಾಗಿ ಈ ಎಸ್ಕ್ರೊ ಖಾತೆಯಿಂದ ಸರಕು ಮಾರಾಟ ಮಾಡಿದ ಅಥವಾ ಸೇವೆ ಒದಗಿಸಿದ ಸಂಸ್ಥೆಯ ಖಾತೆಗೆ ಹಣವನ್ನು ವರ್ಗಾಯಿಸಲಾಗುತ್ತದೆ. ಈ ವಿಧಾನದಲ್ಲಿ ಅವ್ಯವಹಾರವಾಗುವ ಸಾಧ್ಯತೆ ಇದೆ. ಪ್ರತಿ ವ್ಯವಹಾರದ (ವಸ್ತುಗಳನ್ನು ಖರೀದಿಸಿದಾಗ) ವೇಳೆಯೂ ಪಾವತಿಸಬೇಕಾದ ಒಟ್ಟು ಮೊತ್ತದಲ್ಲಿ ಶೇ 0.5ರಷ್ಟು ಹಣವನ್ನು ಕಮಿಷನ್ ರೂಪದಲ್ಲಿ ಕಡಿತ ಮಾಡಲಾಗುತ್ತದೆ.

ಪಿಪಿಐ ವ್ಯವಸ್ಥೆಯಲ್ಲಿನ ಲೋಪ, ಅನಾನುಕೂಲಗಳನ್ನು ಅಧ್ಯಯನ ಮಾಡುವುದಕ್ಕೆ ಸಂಬಂಧಿಸಿದಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್.ಬಿ.ಐ) 2014ರಲ್ಲಿ ನಚಿಕೇತ್ ಮೋರ ಅವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತು. ಸಮಿತಿಯು ಹಣ ವರ್ಗಾವಣೆ ವೇಳೆಯಲ್ಲಿನ ನಡೆಯಬಹುದಾದ ಅಕ್ರಮ, ಮುಂಚಿತವಾಗಿಯೇ ಪಾವತಿಸಿದ ಹಣಕ್ಕೆ ಬಡ್ಡಿ ನೀಡಲಾಗದೇ ಇರುವುದು ಮೊದಲಾದ ಎಲ್ಲಾ ಅಂಶಗಳನ್ನೂ ಅಧ್ಯಯನ ನಡೆಸಿತು. ಪಿ.ಪಿ.ಐ ವ್ಯವಸ್ಥೆಯಡಿ ವ್ಯವಹಾರ ಮಾಡುವುದಕ್ಕೆ ಪರವಾನಿಗೆ (ಲೈಸನ್ಸ್) ನೀಡುವುದನ್ನು ನಿಲ್ಲಿಸಬೇಕು. ಪೇಮೆಂಟ್ ಬ್ಯಾಂಕ್‌ಗಳನ್ನು ಪ್ರಾರಂಭಿಸಲು ಅನುಮತಿ (ಲೈಸನ್ಸ್) ನೀಡಬೇಕು ಎಂದು ಸಮಿತಿಯು ಶಿಫಾರಸು ಮಾಡಿತು.

ಇದರ ಫಲಶ್ರುತಿ ಎಂಬಂತೆ ಭಾರತೀಯ ರಿಸರ್ವ್ ಬ್ಯಾಂಕ್, 2015ರ ಆಗಸ್ಟ್ 19ರಂದು ದೇಶದ 11 ಸಂಸ್ಥೆಗಳಿಗೆ ಪೇಮೆಂಟ್ ಬ್ಯಾಂಕ್ ಆರಂಭಿಸಲು 18 ತಿಂಗಳ ಅವಧಿಯವರೆಗೆ ಷರತ್ತುಬದ್ಧ ಅನುಮತಿಯನ್ನು ನೀಡಿದೆ.

### ಏನಿದು ಪೇಮೆಂಟ್ ಬ್ಯಾಂಕ್?

ಪೇಮೆಂಟ್ ಬ್ಯಾಂಕ್ ಎಂದರೆ ಹಣ ಪಾವತಿ ಸೇವೆಗಳಿಗೆ ಸಂಬಂಧಿಸಿದಂತೆ ಬ್ಯಾಂಕಿಂಗ್ ಚಟುವಟಿಕೆಗಳನ್ನು ಸೀಮಿತ ಪ್ರಮಾಣದಲ್ಲಿ ನಡೆಸುವಂತಹ ಸಂಸ್ಥೆ. ಇದರಿಂದ ಡೆಬಿಟ್ ಕಾರ್ಡ್ ಅಲ್ಲದೇ ಮೊಬೈಲ್ ಫೋನ್ ಮೂಲಕವೂ ಹತ್ತಾರು ಬಗೆಯ ಹಣ ಪಾವತಿ ಸೇವೆಗಳನ್ನು ಪಡೆದುಕೊಳ್ಳಲು ಅವಕಾಶವಾಗುತ್ತದೆ.

ಈ ವ್ಯವಸ್ಥೆಯೂ ಒಂದು ಕೋನದಲ್ಲಿ ಪಿ.ಪಿ.ಐ ಮಾದರಿಯಲ್ಲಿಯೇ ಇದೆ. ಆದರೆ ಇಲ್ಲಿ ಸೂಪರ್ ಮಾರ್ಕೆಟ್ ಸರಣಿಗಳು, ಮೊಬೈಲ್ ಫೋನ್ ಸೇವಾ ಸಂಸ್ಥೆಗಳು, ಬ್ಯಾಂಕಿಂಗೇತರ ಹಣಕಾಸು ಸಂಸ್ಥೆಗಳು, ಅಂಚೆ ಕಚೇರಿ, ವ್ಯವಸಾಯ ಹಾಗೂ ಡೈರಿ ಸಂಬಂಧಿತ ಸಹಕಾರಿ ಸಂಘಗಳು ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲಾಗುತ್ತಿದೆ.

ಮೊಬೈಲ್ ಫೋನ್‌ನಲ್ಲಿ ನಾವು ಕರೆ ಮಾಡುವುದು, ಮೆಸೇಜ್ ರವಾನೆ, ಅಂತರ್ಜಾಲ ಸಂಪರ್ಕ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಮೊದಲೇ ಹಣ ಪಾವತಿಸಿ (ಕರೆನ್ಸಿ ರೀಚಾರ್ಜ್) ಬಳಸಿಕೊಳ್ಳುವ ಹಾಗೆಯೇ ಎಲ್ಲಾ ಸಣ್ಣ ಪ್ರಮಾಣದ ವಾಣಿಜ್ಯ ವಹಿವಾಟುಗಳಿಗೆ ಹಣ ಪಾವತಿಸುವುದಕ್ಕೆ, ಒಂದು ಮೊಬೈಲ್ ಫೋನ್‌ನಿಂದ ಇನ್ನೊಂದು ಮೊಬೈಲ್ ಫೋನ್‌ಗೆ ಅಥವಾ ನಮ್ಮ ಬ್ಯಾಂಕ್ ಖಾತೆಯಿಂದ ಇನ್ನೊಂದು ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲು ಪೇಮೆಂಟ್ ಬ್ಯಾಂಕ್‌ನಲ್ಲಿ ಅವಕಾಶವಾಗಲಿದೆ.

| ಅನುಮತಿ ಪಡೆದ ಸಂಸ್ಥೆ |
|---|
| ಅಂಚೆ ಇಲಾಖೆ |
| ಎನ್.ಎಸ್.ಡಿ.ಎಲ್ |
| ರಿಲಯನ್ಸ್ |
| ಆದಿತ್ಯ ಬಿರ್ಲಾ ನುವೋ |
| ಏರ್‌ಟೆಲ್ ಎಂ ಕಾಮರ್ಸ್ |
| ಫಿನೋಪೇಟೆಕ್ |
| ಪೇ.ಟಿಎಂ |
| ಟೆಕ್ ಮಹೀಂದ್ರಾ |
| ವೋಡಾಫೋನ್ ಎಂ ಪೇಸಾ |
| ಚೋಳಮಂಡಲಮ್ ಡಿಸ್ಟ್ರಿಬ್ಯೂಷನ್ ಸರ್ವಿಸಸ್ |
| ಸನ್ ಫಾರ್ಮಾ |

ಭಾರತದಲ್ಲಿ ಅಂದಾಜು 94 ಕೋಟಿ ಮಂದಿ ಮೊಬೈಲ್ ಫೋನ್ ಬಳಕೆದಾರರಿದ್ದಾರೆ. ಅಂದರೆ ದೇಶದ ಜನಸಂಖ್ಯೆಯ (125 ಕೋಟಿ) ಶೇ 75 ಜನರು ಮೊಬೈಲ್ ಫೋನ್ ಬಳಸುತ್ತಿದ್ದಾರೆ. ಹಾಗೆಯೇ ವಿವಿಧ ಬ್ಯಾಂಕ್ಗಳಲ್ಲಿ ಖಾತೆ ಹೊಂದಿರುವವರು 60 ಕೋಟಿ ಮಂದಿ ಇದ್ದಾರೆ. ಅಂದರೆ ದೇಶದ ಜನಸಂಖ್ಯೆಯ ಶೇ 50ರಷ್ಟು ಮಂದಿ ಮಾತ್ರವೇ ಬ್ಯಾಂಕ್ ಖಾತೆ ಹೊಂದಿದ್ದಾರೆ.

ಬ್ಯಾಂಕ್ ಖಾತೆ ಹೊಂದದೇ ಇರುವ ಬಹಳಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. ಹಾಗಾಗಿ ದೇಶದ ಜನರನ್ನು ಕೇಂದ್ರ ಸರ್ಕಾರ ಮತ್ತು ಆರ್‌ಬಿಐನ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾದ 'ವಿತ್ತೀಯ ಸೇರ್ಪಡೆ'ಗೆ ಒಳಪಡಿಸಲು ಈವರೆಗೆ ಸಾಧ್ಯವಾಗಿಲ್ಲ. ಹಾಗಾಗಿ, ಈ ವಿಶಿಷ್ಟ ಪೇಮೆಂಟ್ ಬ್ಯಾಂಕ್ ಮಾದರಿಯು ಸುಲಭವಾಗಿ ಎಲ್ಲರೂ ವಿತ್ತೀಯ ಸೇರ್ಪಡೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡಲಿದೆ.

3ನೇ ಪುಟಕ್ಕೆ...

### ಪೇಮೆಂಟ್ ಬ್ಯಾಂಕ್ ಚಟುವಟಿಕೆಗಳೇನು?

- ಗ್ರಾಹಕರೊಬ್ಬರಿಂದ ಗರಿಷ್ಠ ₹1 ಲಕ್ಷದವರೆಗೆ ಬೇಡಿಕೆ ಆಧರಿಸಿದ ಠೇವಣಿ ಸ್ವೀಕರಿಸಬಹುದು. ಅದು ಉಳಿತಾಯ ಖಾತೆ ಅಥವಾ ಚಾಲ್ತಿ ಖಾತೆ ಆಗಿರಬಹುದು.
- ಆರ್.ಬಿ.ಐ ನಿಗದಿಪಡಿಸಿದಂತೆ ಈ ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ.
- ಡೆಬಿಟ್ ಕಾರ್ಡ್‌ಗಳನ್ನು ಮಾತ್ರವೇ ವಿತರಿಸುವುದು. ಕ್ರೆಡಿಟ್ ಕಾರ್ಡ ನೀಡಲು ಅವಕಾಶವಿಲ್ಲ.
- ಸಾಲ ಸೌಲಭ್ಯ ನೀಡಲು ಅವಕಾಶವಿಲ್ಲ. ಆದ್ದರಿಂದ ವಾಣಿಜ್ಯ ಬ್ಯಾಂಕ್‌ಗಳಿಗೆ ಈಗ ಹೊರೆಯಾಗಿರುವ ವಸೂಲಾಗದ ಸಾಲ ಪ್ರಮಾಣದ (ಎನ್‌ಪಿಎ) ರೀತಿಯ ಸಮಸ್ಯೆ ಈ ಪೇಮೆಂಟ್ ಬ್ಯಾಂಕ್‌ಗಳಿಗೆ ಇರುವುದಿಲ್ಲ.
- ಗ್ರಾಹಕರು ಠೇವಣಿಯಾಗಿ ಇರಿಸಿದ ಹಣವನ್ನು ಸಾಲ ನೀಡಲು ಬಳಸುವುದಿಲ್ಲವಾದ್ದರಿಂದ, ಸಂಗ್ರಹವಾದ ಹಣವನ್ನು ಸರಕಾರದ ಸಾಲಪತ್ರಗಳು, ಬಾಂಡ್‌ಗಳಲ್ಲಿ ಹಾಗೂ ಟ್ರೆಜರಿ ಬಿಲ್‌ಗಳಲ್ಲಿ ಮಾತ್ರ ಹೂಡಿಕೆ ಮಾಡಲಾಗುತ್ತದೆ. ಇದರಿಂದ ಖಾತೆದಾರರ ಹಣವೂ ಸುಭದ್ರವಾಗಿರುತ್ತದೆ.
- ಯಾವುದೇ ಸೇವೆ ಒದಗಿಸಿದ್ದಕ್ಕೆ ತಗಲುವ ವೆಚ್ಚವನ್ನು ಕಮಿಷನ್ ರೂಪದಲ್ಲಿ ಪಡೆಯುವುದರಿಂದ ಇದುವೇ ಆದಾಯದ ಮೂಲವಾಗಿರುತ್ತದೆ.
- ವಾಣಿಜ್ಯ ಬ್ಯಾಂಕ್‌ಗಳ ಹಾಗೆಯೇ ಪೇಮೆಂಟ್ ಬ್ಯಾಂಕ್‌ಗಳೂ ಸಹ ನಗದು ಮೀಸಲು ಅನುಪಾತವನ್ನು (ಕ್ಯಾಷ್ ರಿಸರ್ವ್ ರೇಷಿಯೊ-ಸಿ.ಆರ್.ಆರ್) ಹೊಂದಿರುತ್ತವೆ.
- ಹೂಡಿಕೆದಾರರಿಗೆ ಠೇವಣಿಗಳಿಗೆ, ಹಣಕ್ಕೆ ಕಂಟಕ ತರದಂತಹ ಹಣಕಾಸು, ಅರೆ ಹಣಕಾಸು ಉತ್ಪನ್ನಗಳನ್ನು ಅಥವಾ ಯೋಜನೆಗಳನ್ನು ಮಾರಾಟ ಮಾಡಲು ಪೇಮೆಂಟ್ ಬ್ಯಾಂಕ್‌ಗಳಿಗೆ ಅನುಮತಿ ನೀಡಲಾಗಿದೆ.